Speaker's Announcement.

Mr. SPEAKER.—In regard to the Mysore Ayurvedic and Unani Practitioners Registration and Medical Practitioners Miscellaneous Provisions Bill, 1960, which was referred to a Select Committee yesterday, I may state that under Rule 232 of the Rules of Procedure and Conduct of Business in the Mysore Legislative Assembly, the Minister for Law and Labour will also be a member of the Select Committee.

Under Rule 232 (1) of the Rules of Procedure and conduct of Business in the Mysore Legislative Assembly, Dr. K. K. Hegde, Minister for Health, will be the Chairman of the Committee.

MEMBER'S REPRESENTATION

†ಶ್ರೀ ಬಿ. ಕೆ. ಪುಟ್ಟರಾಮಯ್ಯ (ಚೆನ್ನಪಟ್ಟಣ).—ಸ್ವಾಮಿ, ನಿನ್ನೆಯ ದಿವಸ ನಾನು ನಾಗನಗೌಡ ಕಮಿಟಿ ರಿಪೋರ್ಟಿನ ಬಗ್ಗೆ ವಿಚಾರಮಾಡಿದಾಗ ತಾವು ನಾಳೆ ದಿವಸ ರೆಪ್ರಸೆಂಟ್ ಮಾಡಬಹುದು ಎಂದು ಹೇಳಿದಿರಿ. ಆದ್ದರಿಂದ ಈ ದಿವಸ ಆ ಬಗ್ಗೆ ನಾನು ಮಾತನಾಡಲು ಅವಕಾಶ ಕೊಟ್ಟಿದ್ದೀರಿ. ಹೋದ ಬಡೆಟ್ ಅಧಿವೇಶನದಲ್ಲಿ ಡಾ. ನಾಗನಗೌಡರ ಕಮಿಟಿ ವರದಿ ಪರಿಪೂರ್ಣವಾಗದೆ ಇರುವಾಗಲೇ ಅವರು ಒಂದು ಇಂಟೆರಿಂ ರಿಪೋರ್ಟಿನ ಮೇಲೆ ಆಗಿದ್ದ ಸರ್ಕಾರಿ ಆಜ್ಞೆಗಳನ್ನು ಅನೇಕ ಜನ ಸ್ವೀ ಮಾಡಬೇಕು, ಪರಿಪೂರ್ಣವಾದ ವರದಿ ಅವರಿಂದ ಬಂದಮೇಲೆ ಈ ಸಭೆಯಲ್ಲಿ ಅದು ಚರ್ಚೆಯಾಗಬೇಕು ಎಂದು ಕೇಳಿದಾಗ ನನಗೆ ಖಾತರಿ ಇದೆ, ಮುಖ್ಯಮಂತ್ರಿಗಳು ಆ ಬಗ್ಗೆ ಪರಿಪೂರ್ಣವಾದ ವರದಿ ಬಂದಮೇಲೆ ಈ ಸಭೆಯಮುಂದೆ ಚರ್ಚೆಮಾಡಿ ಒಂದು ಅಂತ್ಯ ತೀರ್ಮಾನವನ್ನು ತೆಗೆದುಕೊಳ್ಳೋಣವೆಂದು ಹೇಳಿದ್ದು. ಅದು ನನಗೆ ಚೆನ್ನಾಗಿ ಜ್ಞಾಪಕವಿದೆ. ಅದಲ್ಲದೆ ದೇಶಕ್ಕೆ ಸಂಬಂಧಪಟ್ಟ ಅತಿಮುಖ್ಯವಾದ ಕಾನೂನುಗಳನ್ನು ಮಾಡುವಾಗ, ದೇಶದ ಜನರ ಹಿತಕ್ಕೆ ಸಂಬಂಧಪಟ್ಟಂತೆ ಕಾನೂನುಗಳನ್ನು ರಚಿಸುವಾಗ ಮತ್ತು ಅವರ ಏಳಿಗೆಗೋಸ್ಕರ ಕಾಯಿದೆಗಳನ್ನು ಮಾಡುವಾಗ ಈ ಸಭೆಯ ಅಭಿಪ್ರಾಯವನ್ನು ತೆಗೆದುಕೊಳ್ಳುವುದು ಸೂಕ್ತವಾದುದು ಎಂಬುದನ್ನು ಸರ್ಕಾರ ಮನಗಾಣಬೇಕು. ಹಿಂದೆ ಶ್ರೀ ವಾರ್ಡ ಜತ್ತಿಯವರು ಎಸೆಂಬ್ಲಿ ಸದಸ್ಯರಾಗಿದ್ದಾಗ್ಗೆ ಲ್ಯಾಂಡ್ ಸೀಲಿಂಗ್ ವಿಷಯದಲ್ಲಿ ಅವರದೇ ಆದ ಒಂದು ವರದಿಯನ್ನು ಸರ್ಕಾರ ಆಗರೇ ಒಪ್ಪಿಕೊಂಡು ಆರ್ಡರ್ ಮಾಡಿದಾಗಿದ್ದರೆ ಈ ಸಭೆಯ ಒಪ್ಪಿಗೆಯನ್ನು ಪಡೆಯಲು ಈಗ ಲ್ಯಾಂಡ್ ರಿಫಾರಮ್ಸ್ ಬಿಲ್ಲನ್ನು ತರಬೇಕಾಗಿಯೇ ಇರಲಿಲ್ಲ.

ಅಧ್ಯಕ್ಷರು.—ಡಾ. ನಾಗನಗೌಡ ಕಮಿಟಿ ವರದಿಯ ವಿಷಯವಾಗಿ ಮಾತನಾಡುತ್ತಿರುವಾಗ ಲ್ಯಾಂಡ್ ರಿಫಾರಮ್ಸ್ ಬಿಲ್ಲಿನ ವಿಷಯ ಏಕೆ ಬಂತು?

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ನನ್ನ ಚರ್ಚೆಯನ್ನು ಸಬ್‌ಸ್ಟಾನ್ಸಿಯೇಟ್ ಮಾಡಿ ಹೇಳುತ್ತಿದ್ದೇನಷ್ಟೆ. ನನಗೆ ಏನು ತಿಳಿಯುತ್ತದೋ ಅದನ್ನು ಇದಕ್ಕೆ ಸಂಬಂಧಪಟ್ಟಹಾಗೆ ಹೇಳುತ್ತಿದ್ದೇನೆ.

ಅಧ್ಯಕ್ಷರು.—ನೀವು ಆ ರೀತಿ ಹೇಳುವುದಕ್ಕೆ ನಾನು ಬೇಡ ಎಂದು ಹೇಳುವುದಿಲ್ಲ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ತಾವು ಅಧ್ಯಕ್ಷರಾಗಿದ್ದೀರಿ. ಸರ್ಕಾರದಿಂದ ಈ ವರದಿಯನ್ನು ಈ ಸಭೆಯಲ್ಲಿ ಚರ್ಚೆ ಮಾಡುವುದಕ್ಕೆ ಸಾಕಷ್ಟು ಕಾಲಾವಕಾಶವನ್ನು ಕೊಡಿಸುತ್ತೇನೆಂದು ತಾವು ಅಪ್ಪಣೆ ಕೊಡಿಸುವುದಾದರೆ ನಾನು ಏನೂ ಹೇಳಬೇಕಾಗಿಯೇ ಇಲ್ಲ. ಏಕೆಂದರೆ ಹಿಂದೆಯೇ ಈ ಸರ್ಕಾರದವರು ಈ ವರದಿಯನ್ನು ಈ ಸಭೆಯಮುಂದೆ ಇಟ್ಟು ಚರ್ಚೆಮಾಡುತ್ತೇವೆಂದು